ಬದುಕು ಬದಲಿಸಿದ

# ಭಾವೇಶ್ ಭಾಟಿಯಾ

## ಅಂಧ ಉದ್ಯೋಗ ಜನಕನ ಸಾಹಸಗಾಥೆ

■ ನೇಮಿಚಂದ್ರ
ಕಲೆ: ಮನೋಹರ ಕೆ. ಆಚಾರ್ಯ

## ಅಪಮಾನಗಳ ಅಗ್ನಿದಿವ್ಯದಲ್ಲಿ ಆತ್ಮವಿಶ್ವಾಸದ ಬೆಳಕು

ತಂದೆಯೊಂದಿಗೆ ಅವರ ಕಚೇರಿಯಲ್ಲಿ ಕೆಲಸ ಮಾಡುವ ಸಮಯದಲ್ಲಿ ಭಾವೇಶ್, ಉದ್ಯಮದಲ್ಲಿ ನೈತಿಕತೆ ಮತ್ತು ವ್ಯವಸ್ಥೆಯ ಬಲು ದೊಡ್ಡ ಪಾಠ ಕಲಿತರು. ಒಂದು ದಿನ, ಅಪ್ಪನೊಡನೆ ಕಚೇರಿಯಲ್ಲಿದ್ದ ಸಮಯ. ಕಚೇರಿಯಲ್ಲಿ ಪೆನ್ಸಿಲ್ ಮುಗಿದು ಹೋದ ಕಾರಣ, ಕಚೇರಿಯ ಗಲ್ಲಾಪೆಟ್ಟಿಗೆಯಿಂದ 20 ಪೈಸೆ ತೆಗೆದುಕೊಂಡು ಓರ್ವ ನೌಕರನಿಗೆ ಕೊಟ್ಟು ಪೆನ್ಸಿಲ್ ತರಲು ಭಾವೇಶ್ ಹೇಳಿದ್ದ. ಆ ದಿನದ ಸಂಜೆ ಗಲ್ಲಾಪೆಟ್ಟಿಗೆಯ ಹಣದ ಲೆಕ್ಕ ತೆಗೆದುಕೊಂಡ ಜಸನೀಜೀ ಅವರಿಗೆ 20 ಪೈಸೆ ಕಡಿಮೆ ಇರುವುದು ಕಂಡಿತು. ಭಾವೇಶ್ ಅವರ ಅನುಮತಿಯನ್ನು ತೆಗೆದುಕೊಳ್ಳದೆಯೇ 20 ಪೈಸೆಯನ್ನು ಪೆನ್ಸಿಲ್ ತರಿಸಲು ಖರ್ಚು ಮಾಡಿದ್ದರು. ಜಸನೀಜೀ ಭಾವೇಶ್‌ನನ್ನು ತಮ್ಮ ಕ್ಯಾಬಿನ್‌ಗೆ ಕರೆದು ಚೆನ್ನಾಗಿ ಬೈದರು. ಅವರು ಹೇಳಿದರು, ‘ನಿನಗೆ ಕೊಟ್ಟಿಲ್ಲದ ಅಧಿಕಾರವನ್ನು ನೀನು ಬಳಸುವಂತಿಲ್ಲ. ಗಲ್ಲಾಪೆಟ್ಟಿಗೆಯಿಂದ ಯಾವುದೇ ಕಾರಣಕ್ಕೆ ಹಣ ತೆಗೆದದ್ದು ಸರಿಯಲ್ಲ’.

ಭಾವೇಶ್‌ಗೆ ಬಹಳ ಕೆಡುಕೆನಿಸಿತು. 20 ಪೈಸೆಯ ಕಾರಣಕ್ಕೆ ಇಷ್ಟೊಂದು ಬೈಯುವುದೆ. ತಾನೇನೂ ಆ ಹಣವನ್ನು ಸ್ವಂತಕ್ಕೆ ಬಳಸಿರಲಿಲ್ಲವಲ್ಲ. ಪೆನ್ಸಿಲ್ ತರಲು ಕೊಟ್ಟಿದ್ದೆ. ಸರಿ ನಾನಿನ್ನು ಅವರ ಕಚೇರಿಗೆ ಹೋಗುವುದೇ ಇಲ್ಲ ಎಂದು ನಿರ್ಧರಿಸಿ ಭಾವೇಶ್ ಮನೆಗೆ ಬಂದ. ತಾಯಿಯ ಬಳಿ ಇಡೀ ಪ್ರಕರಣವನ್ನು ಹೇಳಿ, ಜಸನೀಜೀ ಅವರ ಬಗ್ಗೆ ದೂರಿದ.

ತಾಯಿ ಅತ್ಯಂತ ತಾಳ್ಮೆಯಿಂದ ಭಾವೇಶ್‌ಗೆ ವಿವರಿಸಿ ಹೇಳಿದಳು. ‘ಜಸನೀಜೀ ನಿನ್ನನ್ನು ಬೈಯ್ದದ್ದು 20 ಪೈಸೆಗಾಗಿ ಅಲ್ಲ. ವ್ಯಾಪಾರದ ನಿಯಮ ಮತ್ತು ವ್ಯವಸ್ಥೆಯನ್ನು ಪಾಲಿಸುವುದು ಬಹಳ ಮುಖ್ಯ ಎಂದು ಅವರು ನಿನಗೆ ತಿಳಿಸಿದ್ದಾರೆ. ಅವರು ಬೈದರು ಎಂದು ಕೋಪ ಮಾಡಿಕೊಳ್ಳುವ ಬದಲು, ಅವರಿಂದ ಒಂದು ಪಾಠ ಕಲಿತೆ ಎಂದು ನೀನು ಭಾವಿಸು.’ ಬಾಲ್ಯದಲ್ಲಿ ಈ 20 ಪೈಸೆಯ ಪ್ರಕರಣದಿಂದ ಕಲಿತ ಪಾಠಗಳು ಭಾವೇಶ್ ಅವರಿಗೆ ನಂತರದ ದಿನಗಳಲ್ಲಿ ತಮ್ಮದೇ ಉದ್ಯಮವನ್ನು ಆರಂಭಿಸಿದಾಗ ಸಹಾಯಕ್ಕೆ ಬರಲಿದ್ದವು. ಯಾವ ಮ್ಯಾನೇಜ್‌ಮೆಂಟ್ ಶಾಲೆಗಳಲ್ಲೂ ಸಿಗದಿದ್ದ ಪ್ರಾಯೋಗಿಕ ಕಲಿಕೆಯ ತಾಣವಾಗಿತ್ತು ಬಾಲ್ಯದ ಅವರ ಈ ಎಲ್ಲ ಅನುಭವಗಳು. ಅದರೊಟ್ಟಿಗೆ ಬದುಕನ್ನು, ಬದುಕು ಕಲಿಸುವ ಪಾಠಗಳನ್ನು ಸಕಾರಾತ್ಮಕ ದೃಷ್ಟಿಯಿಂದ ನೋಡುವ ಸತತ ಕಲೆಯನ್ನು ಆ ತಾಯಿ ಭಾವೇಶ್‌ಗೆ ಕಲಿಸಿದ್ದಳು.

ಬದುಕಿನಲ್ಲಿ ಬಹಳಷ್ಟು ಘಟನೆಗಳು ಎಲ್ಲರ ಜೀವನದಲ್ಲಿಯೂ ಘಟಿಸುತ್ತವೆ. ಅವುಗಳಲ್ಲಿ ಸೋಲು, ಅಪಮಾನ, ಅಹಿತಕರ ಘಟನೆಗಳೂ ಇರುವುದುಂಟು. ಯಾವುದೂ ಸಮಸ್ಯೆಯಲ್ಲ, ಎಲ್ಲವೂ ಸವಾಲು; ಯಾವುದೂ ಸೋಲಲ್ಲ, ಎಲ್ಲವೂ ಬದುಕು ಕಲಿಸುವ ಪಾಠಗಳು ಎಂದು ಭಾವೇಶ್ ಕಲಿತಿದ್ದರು. ಅನುಭವ ಎಷ್ಟೇ ಕಹಿಯಾದರೂ, ಅದರಿಂದ ಕಲಿಯುವ ಪಾಠಗಳಿವೆ ಎಂದು ಅರಿತರು. ಬಹಳಷ್ಟು ಬಾರಿ, ಅಹಿತಕರ ಘಟನೆಯ ಕಹಿಯನ್ನಷ್ಟೇ ನೆನಪಿಟ್ಟುಕೊಂಡು ಕೋಪಗೊಂಡಾಗ ಎದೆ ರಣರಂಗವಾಗುತ್ತದೆ. ಆ ಕಾರಣಕ್ಕೆ ಅದು ಕಲಿಸುವ ಪಾಠಗಳಿಗೆ ನಾವು ಕುರುಡಾಗುತ್ತೇವೆ. ಬದುಕಿನ ಅತ್ಯಮೂಲ್ಯ ಕಲಿಕೆಯ ಅವಕಾಶ ಕಳೆದು ಹೋಗುತ್ತದೆ. ಮುನ್ನಡೆದು, ಮಾಡಿದ ತಪ್ಪುಗಳನ್ನೇ ಪುನರಾವರ್ತಿಸುತ್ತೇವೆ. ಭಾವೇಶನ ತಾಯಿ, ಮಗನಿಗೆ ಬದುಕಿನ ಪ್ರತಿ ಅನುಭವದಿಂದಲೂ ಕಲಿಯುವ ಕೌಶಲವನ್ನು ರೂಢಿಸಿದರು. ಈ ನಡುವೆ ಒಮ್ಮೆ ಬಾಂಬೆಗೆ ಹೋದಾಗ ಅಮ್ಮ ಮಾಂಟೆಸರಿ ತರಬೇತಿ ಕೂಡಾ ಪಡೆದು ಬಂದಿದ್ದರು. ಆ ಕಲಿಕೆಯ ಪ್ರಯೋಗ ಭಾವೇಶ್‌ನ ಮೇಲೆ ಸಕಾರಾತ್ಮಕವಿತ್ತು.

ಬಹಳಷ್ಟು ಅಂಧರಂತೆ ಭಾವೇಶ್ ಮನೆಯಲ್ಲಿ ಕುಳಿತವನಲ್ಲ. ಕಣ್ಣು ಕಾಣುವುದಿಲ್ಲ ಎಂಬ ಒಂದೇ ಕಾರಣಕ್ಕೆ, ತನಗೆ ತಾನೇ ಮಿತಿಗಳನ್ನು ಸರಹದ್ದುಗಳನ್ನು ಹಾಕಿಕೊಂಡು ಹೊರ ಜಗತ್ತಿನ ಅನುಭವಗಳಿಂದ ವಂಚಿತನಾಗಲಿಲ್ಲ. ಸಾಹಸ ಪ್ರವೃತ್ತಿಯ ಭಾವೇಶ್ ಬದುಕಿನ ಅನುಭವಗಳಿಗೆ ತೆರೆದುಕೊಳ್ಳಲು ಸದಾ ಸಿದ್ಧನಿದ್ದ. ಭಾವೇಶ್‌ಗೆ ಊರೂರು ಅಲೆಯುವ ಬಯಕೆ. ಜನಕ್ಕೆ ಇದಂತೂ ಅರ್ಥವಾಗುತ್ತಿರಲಿಲ್ಲ. ಕುರುಡನಿಗೆ ಈ ಊರು ಆದರೇನು, ಬೇರೊಂದಾದರೇನು – ಏನು ನೋಡಿಯಾನು? ಕಣ್ಣುಗಳಿಂದ ಮಾತ್ರ ಜಗತ್ತನ್ನು ಕಾಣಬಹುದು ಎಂದು ನಂಬಿದ್ದ ಜನರಿಗೆ, ಜಗತ್ತನ್ನು ಅರಿಯಲು ಆಸ್ಥೆ ಬೇಕು, ಆಸಕ್ತಿ ಬೇಕು, ಕುತೂಹಲ ಬೇಕು, ಮನಸ್ಸು–ಮೆದುಳು ತೆರೆದಿರಬೇಕು ಎಂದು ತಿಳಿಸುವವರಾರು? ಭಾವೇಶ್ ಊರು ಅಲೆಯುವ ಅವಕಾಶಗಳಿಗೆ ಕಾಯುವನು.

ತಂದೆ ಆ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ, ತಯಾರಾದ ಸಿಮೆಂಟಿನ ಪೈಪುಗಳನ್ನು ಗ್ರಾಹಕರಲ್ಲಿಗೆ ತಲುಪಿಸಲು ಹೊತ್ತೊಯ್ಯುವ ಟ್ರಕ್‌ಗಳಿದ್ದವು. ಅನೇಕ ಬಾರಿ ಆ ಟ್ರಕ್‌ಗಳ ಜೊತೆಯಲ್ಲಿ ಭಾವೇಶ್ ಕೂಡಾ ಹೋಗಿ ಬಿಡುವನು. ಆ ಸಮಯದಲ್ಲಿ ಕಂಪನಿಯ ಟ್ರಕ್ ಗಡ್ಚಿರೋಲಿ, ಅಲ್ಲಾಪಲ್ಲಿ, ಸಿರೋಂಚಾ ಮೊದಲಾದ ಜಾಗಗಳಿಗೆ ಹೋಗುತ್ತಿತ್ತು. ಎಳೆಯ ಹುಡುಗನ ಊರೂರು ತಿರುಗುವ ಆಸೆ ಪೂರೈಸಿದ್ದು ಮಾತ್ರವಲ್ಲ, ಬೇರೆ ಬೇರೆ ಜಾಗದಲ್ಲಿ ನಡೆಯುವ ಕೆಲಸಗಳ ಬಗ್ಗೆ ಭಾವೇಶ್‌ಗೆ ತಿಳಿಯುವುದು ಸಾಧ್ಯವಾಯಿತು. ಗ್ರಾಹಕರಿಗೆ ತಾವು ಕೊಂಡ